ಇಸವಿಯಂ ಕರ್ನಾಟಕ ವಿಧಾನಸಭೆ ಸದಸ್ಯರ ಪಕ್ಷಾಂತರ ಆಧಾರದ ಮೇಲೆ ಅನರ್ಹತ ನಿಯಮಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ಮಂಡಿಸಲಾಯಿತು. ಇನ್ನು ಮುಂದೆ ವರದಿಗಳನ್ನು ಒಪ್ಪಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಈ ಕೆಳಕಂಡ ವರದಿಗಳನ್ನು ಒಪ್ಪಿಸುತ್ತೇನೆ.

೧) ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ ೧೯೮೧–೮೨, ೧೯೮೨–೮೩ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ವರದಿಯ (ಸಿವಿಲ್ ಹಾಗೂ ಕಂದಾಯ) ಮೇಲಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಹತ್ತನೆಯ ವರದಿ.

೨) ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ೧೯೭೯–೮೦ ಸಾಲಿನಿಂದ ೧೯೮೨–೮೩ ನೇ ಸಾಲಿನವರೆಗಿನ ಹಣಕಾಸು ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಮಹಾಲೇಖಾ ಪರೀಕ್ಷಕರ ಮೇಲ್ಕಂಡ ಸಾಲುಗಳ ವರದಿಗಳ ಮೇರೆಗೆ (ಸಣ್ಣ ನೀರಾವರಿಗೆ ಸಂಬಂಧಿಸಿದಂತೆ) ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹತ್ತನೆಯ ವರದಿ.

೩) ೧೯೮೩–೮೪ನೇ ವರ್ಷಗಳಲ್ಲಿನ ಹಣ ವಿನಿಯೋಗ (ಪುರಸ್ಕೃತ ಹಾಗೂ ಮತಕ್ಕೊಳಪಟ್ಟ ಹೆಚ್ಚಿನ ವೆಚ್ಚದ ಬಗ್ಗೆ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹನ್ನೊಂದನೆಯ ವರದಿ.

೪) ಕಾಮಗಾರಿ, ಕಾಡ ಮತ್ತು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ೧೯೭೯ ಹಾಗೂ ೧೯೮೨–೮೩ನೇ ಸಾಲುಗಳ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಗಳ ಹಾಗೂ ಭಾರತದ ನಿಯಂತ್ರಿತ ಮಹಾಲೇಖ ಪರೀಕ್ಷಕರ ಮೇಲ್ಕಂಡ ಸಾಲುಗಳ (ಸಿವಿಲ್) ವರದಿಗಳ ಮೇರೆಗೆ(ಕೃಷ್ಣಾ ಮೇಲ್ದಂಡೆಗೆ ಸಂಬಂಧಿಸಿದಂತೆ)

ಅಧ್ಯಕ್ಷರು.— ಮಂಡಿಸಲಾಯಿತು.

ಅಧ್ಯಕ್ಷರು.— ಇನ್ನು ಮುಂದೆ ಸಾರ್ವಜನಿಕ ಮಹತ್ವದ ವಿಷಯಗಳಿಗೆ ಗಮನ ಸೆಳೆಯುವ ಸೂಚನೆಗಳು.

ಶ್ರೀ ಎಸ್. ಬಂಗಾರಪ್ಪ.— ಅದಕ್ಕಿಂತ ಮುಂಚೆ

ಅಧ್ಯಕ್ಷರು.— ಬಂಗಾರಪ್ಪನವರೇ, ನೀವುಕಳುಹಿಸಿದ್ದ ಅಜರ್ನಮೆಂಟ್ ಮೋಷನನ್ನು ಕಾಲಿಂಗ್ ಅಟೆನ್‌ಷನ್ನಾಗಿ ಪರಿವರ್ತಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಅದು ನಮಗೇನೂ ಗೊತ್ತಾಗಲಿಲ್ಲ. ಏನೇ ಇರಲಿ...

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ನೀವು ಮಾತನಾಡ ಹೊರಡುವುದವು ಯಾವ ರೂಲ್ಸಿ,, ಏನು ವಿಚಾರ. ನನಗೆ ಎರಡು ಅಜರ್ನಮೆಂಟ್ ಮೋಷನ್ ಬಂದಿದ್ದವು. ಆ ಪೈಕಿ ಎರಡನೆಯದನ್ನು ಕಾಲಿಂಗ್ ಅಟೆನ್‌ಷನ್ ಮಾಡಿ ನಾಳೆಗೆ ಇಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಕಾಲಿಂಗ್ ಅಟೆನ್‌ಷನ್ನಾಗಿ ಮಾಡುವುದಕ್ಕೆ ತಮಗೆ ಅಧಿಕಾರ ಇದೆ ಹಾಗೆ ತಾವು ಮಾಡಿರುವುದನ್ನು ಒಪ್ಪಿದರೂ ಕೂಡ...

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ನೀವು ಕಳುಹಿಸಿದ್ದನ್ನು ನಾನು ನೇರವಾಗಿ ರಿಜೆಕ್ಟ್ ಮಾಡಬಹುದಿತ್ತು. ಆದರೆ ಹಾಗೆ ಮಾಡದೆ ನಾಳೆಗೆ ಇಟ್ಟಿದ್ದೇನೆ.

ಶ್ರೀ ಧರ್ಮಸಿಂಗ್.— ಇನ್ನಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು ಸ್ವಾಮಿ ನಾವು ಇಲ್ಲಿ ?

ಅಧ್ಯಕ್ಷರು.— ಕಾಲಿಂಗ್ ಅಟೆನ್‌ಷನ್ ಮಾಡಿರುವುದರ ಬಗ್ಗೆ ಈಗಾಗಲೇ ಇಂಟಿಮೇಷನ್ ಕೊಟ್ಟಿದ್ದೇನೆ. ಇಂಟಿಮೇಷನನ್ನು ನಿಮ್ಮ ನಾಯಕರಿಗೆ ಕಳುಹಿಸಿಕೊಡಲಾಗಿದೆ.